‘ಟಗರು’ ಮಾಡಿದ ಸೂರಿ ಹೊಸ ಸಿನಿಮಾ ಈಗಷ್ಟೇ ಆರಂಭಗೊಂಡಿದೆ. ಕಳೆದ ವರ್ಷ ಬಿಡುಗಡೆಯಾದ ‘ಮುಗುಳುನಗೆ’ಯ ನಂತರ ಯೋಗರಾಜ್ ಭಟ್ಟರು ನಿರ್ದೇಶಿಸುತ್ತಿರುವ ‘ಪಂಚತಂತ್ರ’ ಈ ವರ್ಷಾಂತ್ಯಕ್ಕಾದರೂ ಬಿಡುಗಡೆಯ ಭಾಗ್ಯ ಕಾಣುವ ನಿರೀಕ್ಷೆಯಿದೆ. ‘ರಾಜಕುಮಾರ’ ಚಿತ್ರದ ನಂತರ ಸಂತೋಷ್ ಆನಂದ್‌ರಾಮ್ ತಮ್ಮ ಹೊಸ ಸಿನಿಮಾ ‘ಯುವ ರತ್ನ’ದ ಹೆಸರು ಘೋಷಣೆ ಮಾಡಲಿಕ್ಕೇ ಒಂದು ವರ್ಷದ ಏಳು ತಿಂಗಳು ತೆಗೆದುಕೊಂಡರು.

ಎರಡು, ಎರಡೂವರೆ ವರ್ಷಕ್ಕೊಂದು ಸಿನಿಮಾ ಮಾಡಿ, ವಿಪರೀತ ಬಿಲ್ಡಪ್ ಕೊಟ್ಟುಕೊಂಡು ಬೇರೆ ಭಾಷೆಗಳಲ್ಲಿಯೂ ರಿಲೀಸ್ ಮಾಡಿ, ವಾರದ ಗಳಿಕೆ, ಟೀವಿ ರೈಟ್ಸ್‌ಗಳ ಬಗ್ಗೆ ಒಂದಿಷ್ಟು ಹುಸಿ ಸುದ್ದಿ ಹಬ್ಬಿಸಿಬಿಟ್ಟರೆ ಕನ್ನಡ ಸಿನಿಮಾದ ಮಾರುಕಟ್ಟೆ ಬೆಳೆಯುತ್ತದೆಯೇ? ‘ಕನ್ನಡ ಚಿತ್ರರಂಗದ ಸದ್ಯದ ಪರಿಸ್ಥಿತಿಗೆ ತಾರಾನಟರ ಸಿನಿಮಾಗಳ ಕೊರತೆಯೂ ಕಾರಣ’ ಎನ್ನುತ್ತಾರೆ ಹಿರಿಯ ನಟ ಅಂಬರೀಶ್. ವರ್ಷ–ಎರಡು ವರ್ಷಕ್ಕೊಮ್ಮೆ ಬಂದು ಮುಖ ತೋರಿಸಿ ಹೋಗುತ್ತಿದ್ದರೆ ಜನರಿಗೆ ನಟರ ಪರಿಚಯ ಇರುವುದು ಹೇಗೆ ಎಂಬುದು ಅವರ ಪ್ರಶ್ನೆ. ‘ತಾರಾನಟರು ವರ್ಷಕ್ಕೆ ಎರಡಾದರೂ ಸಿನಿಮಾ ಮಾಡಿದರೆ ಚಿತ್ರರಂಗದ ಪರಿಸ್ಥಿತಿ ಎಷ್ಟೋ ಸುಧಾರಿಸುತ್ತದೆ’ ಎನ್ನುತ್ತಾರೆ ಅವರು.

ಅವರ ಮಾತಿನಲ್ಲಿಯೂ ತಥ್ಯವಿದೆ. ಇಂದು ಒಂದಿಷ್ಟು ಪ್ರಯೋಗಾತ್ಮಕ, ಹೊಸ ರೀತಿಯ ಸಿನಿಮಾಗಳು ಬರುತ್ತಿವೆ. ಅವುಗಳನ್ನು ಮಾಡುತ್ತಿರುವುದೂ ಹೊಸಬರೇ. ಅವುಗಳನ್ನು ನೋಡುವ ಸಣ್ಣ ಪ್ರೇಕ್ಷಕಗಣವೂ ಹೊಸದಾಗಿ ಸೃಷ್ಟಿಯಾಗಿದೆ. ಆದರೆ ದೊಡ್ಡ ಪ್ರಮಾಣದಲ್ಲಿ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯುವ ಶಕ್ತಿ ಇರುವುದು ಸ್ಟಾರ್ ನಟರ ಸಿನಿಮಾಗಳಿಗೇ. ಇಂಥವರ ಸಿನಿಮಾಗಳು ನಿರಂತರವಾಗಿ ಬಿಡುಗಡೆಯಾಗುತ್ತಿದ್ದಾಗ ಮಾತ್ರ ಮಾರುಕಟ್ಟೆ ಸ್ವಸ್ಥವಾಗಿರಲು ಸಾಧ್ಯ. ಪ್ರೇಕ್ಷಕಗಣ ಬೆಳೆಯಲು ಸಾಧ್ಯ. ಬರೀ ಸಿನಿಮಾ ಬಿಡುಗಡೆ ಮಾಡುವುದಷ್ಟೇ ಅಲ್ಲ, ಮುಖ್ಯವಾಹಿನಿಯಲ್ಲಿ ಹೊಸ ಬಗೆಯ ಪ್ರಯೋಗಗಳಿಗೆ ಒಡ್ಡಿಕೊಳ್ಳುವ ಮೂಲಕ




‘ಚಮಕ್’ ಚಿತ್ರದ ನಂತರ ಕಣ್ಮರೆಯಾಗಿದ್ದ ಗಣೇಶ್ ಈಗ ‘ಗೀತಾ’ ಚಿತ್ರದ ಮೂಲಕ ಪ್ರೇಕ್ಷಕರಿಗೆ ಮುಖಾಮುಖಿ ಆಗಲಿದ್ದಾರೆ.

ಚಿತ್ರರಂಗವನ್ನು ಎತ್ತರಕ್ಕೇರಿಸುವ ಅಗತ್ಯವನ್ನು ತಮ್ಮ ಹೊಣೆಗಾರಿಕೆ ಎಂದು ಗಣಿಸಿದಾಗ ಮಾತ್ರ ಪರಭಾಷಾ ಸಿನಿಮಾ ನರ್ತನಕ್ಕೆ ಸೆಡ್ಡು ಹೊಡೆಯುವ ಧೈರ್ಯವನ್ನೂ ಸತ್ವವನ್ನೂ ಗಳಿಸಿಕೊಳ್ಳಲು ಸಾಧ್ಯ.

ನಮ್ಮ ಎಷ್ಟೋ ಜನಪ್ರಿಯ ನಿರ್ದೇಶಕರಿಗೆ ಇರುವ ಬೌದ್ಧಿಕ ಬಡತನವೂ ಚಿತ್ರರಂಗದ ದಿವಾಳಿಗೆ ಕಾರಣವಾಗಿದೆ. ‘ಸ್ಟಾರ್ ನಟರು, ಅದ್ದೂರಿ ಕ್ಯಾನ್ವಾಸ್ ಇದ್ದರೆ ಸಾಕು. ಬಿಗ್ ಬಜೆಟ್ ಸಿನಿಮಾ ಮಾಡಿ ಮುಗಿಸಬಹುದು’ ಎಂಬುದು ಇಂದಿಗೂ ಹಲವು ಅನುಭವಿ ನಿರ್ದೇಶಕರ ಅಚಲ ನಂಬಿಕೆ. ಈ ನಂಬಿಕೆಗೆ ಧಕ್ಕೆಯಾಗುವಂಥ ಪ್ರತಿಕ್ರಿಯೆಗಳು ಬಂದಾಗ ಅವರು ಸಿಡಿದೇಳುತ್ತಾರೆ. ‘ಬಾಹುಬಲಿ ಸಿನಿಮಾ ಆದ್ರೆ ಬಾಯಿ ಬಿಟ್ಕೊಂಡು ನೋಡ್ತೀರಾ. ಕನ್ನಡದಲ್ಲಿ ನಾವು ಬಿಗ್ ಬಜೆಟ್ ಮಾಡೋಕೆ ಹೋದರೆ ವ್ಯಂಗ್ಯ ಮಾಡ್ತೀರಿ. ಗಿಮಿಕ್ ಅಂತೀರಿ’ ಎಂದು ನಿರ್ದೇಶಕ ಆರ್. ಚಂದ್ರು ಒಂದು ಪತ್ರಿಕಾಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು. ‘ದಿ ವಿಲನ್’ ಚಿತ್ರಕ್ಕೆ ಸೋಷಿಯಲ್ ಮೀಡಿಯಾಗಳಲ್ಲಿ ವ್ಯಕ್ತವಾದ ಟೀಕೆಗಳಿಗೆ ಪ್ರೇಮ್ ಕೂಡ ‘ಯಾರ್ಯಾರು ಬರ್ತಿರಾ ಬನ್ನಿ. ಯಾರು ತಮಾಷೆ ಮಾಡಿ ವಿಡಿಯೊ ಮಾಡಿದ್ದೀರೋ ಎಲ್ಲರ ಲಿಸ್ಟೂ ನನ್ನ ಬಳಿ ಇದೆ. ಯುದ್ಧ ಸಾರುತ್ತೀನಿ ನಾನು’ ಎಂದು ತಮ್ಮ ಸಿನಿಮಾಗಳ ಶೈಲಿಯಲ್ಲಿಯೇ ಸವಾಲು ಹಾಕಿದ್ದರು. ಅದ್ದೂರಿತನ ಎಂದರೆ ಬರೀ ಕಾರ್‌ಗಳನ್ನು ಆಕಾಶಕ್ಕೆ ಹಾರಿಸುವುದು ಮಾತ್ರವೇ ಅಲ್ಲ. ಹಾಡುಗಳಲ್ಲಿ ನೂರು ಗ್ರಾಫಿಕ್ ಚಿಟ್ಟೆಗಳನ್ನು ಹಾರಿಸಿ, ಡೈನೋಸಾರ್ ತೋರಿಸುವುದಷ್ಟೇ ಅಲ್ಲ. ದೃಶ್ಯಕ್ಕೊಂದು ಕೇಶವಿನ್ಯಾಸ ಬದಲಿಸಿದ ಮಾತ್ರಕ್ಕೆ ಅದು ಸೃಜನಶೀಲ ಸಿನಿಮಾ ಆಗುವುದಿಲ್ಲ ಎನ್ನುವ ಸತ್ವವನ್ನು ಅವರಿಗೆ ತಿಳಿಸುವುದು ಹೇಗೆ? ಇದೊಂದು ಬಗೆಯಲ್ಲಿ ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು? ಎನ್ನುವ ಪ್ರಶ್ನೆಯಂತೆ ತೋರುತ್ತದೆ.

‘ಚಿತ್ರರಂಗದ ಆರೋಗ್ಯವೃದ್ಧಿಯಾಗಬೇಕು ಎಂದರೆ ಸ್ಟಾರ್ ನಟರು ಮತ್ತು ಸ್ಟಾರ್ ನಿರ್ದೇಶಕರು ಇಬ್ಬರೂ ತಮ್ಮ ಸುರಕ್ಷಿತ ವೃತ್ತದಾಚೆಗೆ ಒಂದು ಹೆಜ್ಜೆ ಇಡಬೇಕಾಗ ಅಗತ್ಯ

## ವರ್ಕ್ ಆಗೋ ಫ್ಯಾಕ್ಟರ್!

ಒಂದು ಇಂಡಿಪೆಂಡೆಂಟ್ ಸಿನಿಮಾದಲ್ಲಿ ನಟಿಸುವಂತೆ ಒಬ್ಬ ಸ್ಟಾರ್ ನಟನನ್ನು ಕೇಳಲು ಚಿತ್ರತಂಡ ಭೇಟಿಮಾಡಿತ್ತು. ಆ ಪಾತ್ರಕ್ಕೆ ಆ ತಾರಾ ನಟ ಸೂಕ್ತವಾಗಿ ಹೊಂದುವಂತಿದ್ದರು. ಅಲ್ಲದೆ ಅವರು ನಟಿಸುತ್ತಿದ್ದಾರೆ ಎಂದರೆ ಹಣ ಹೂಡುವವರು ಮುಂದೆ ಬರುತ್ತಾರೆ ಎಂಬ ಆಲೋಚನೆಯೂ ತಂಡಕ್ಕಿತ್ತು. ಆದರೆ ಕಥೆ ಕೇಳಿದ ಯುವನಟ ನೀಡಿದ ಪ್ರತಿಕ್ರಿಯೆ ಮಾತ್ರ ಬೇರೆಯೇ ಇತ್ತು. ‘ಕೆಲವು ಅಂಶಗಳು ಇವೆ. ನಾನು ಈ ಸಿನಿಮಾದಲ್ಲಿ ನಟಿಸಬೇಕು ಎಂದರೆ ಆ ಅಂಶಗಳನ್ನು ಈ ಸಿನಿಮಾದಲ್ಲಿ ಹಾಕಲೇ ಬೇಕು’ ಎಂದರು. ಅವರನ್ನು ಮನವೊಲಿಸುವ ಪ್ರಯತ್ನ ಮುಂದುವರಿಯಿತು. ‘ಸರ್ ನಿಮ್ಮ ಸಿನಿಮಾ ನೋಡುತ್ತಿದ್ದೇವೆ. ನೀವು ಈ ಹಿಂದೆ ಮಾಡಿದ ಕೆಲವು ಸಿನಿಮಾಗಳನ್ನು ನಿರಂತರವಾಗಿ ನೋಡುವಾಗ ನಾವು ಯಾವ ಸಿನಿಮಾ ನೋಡುತ್ತಿದ್ದೇವೆ ಎನ್ನುವ ಗೊಂದಲ ಆಗ್ತಿತ್ತು. ಎಲ್ಲ ಸಿನಿಮಾಗಳೂ ಒಂದೇ ರೀತಿ ಅನಿಸುತ್ತಿದ್ದವು’ ಎಂದು ಒಂದೇ ಜಾಡಿಗೆ ಬೀಳುವುದರಿಂದ ಉಂಟಾಗುವ ಅಪಾಯದ ಕುರಿತು ಗಮನ ಸೆಳೆಯಲಾಯಿತು. ಆದರೆ ಅವರಿಗೆ ಈ ಸಂಗತಿ ಕೊರತೆಯಾಗಿ ಕಾಣಿಸದೆ, ಪ್ರಶಂಸೆಯಾಗಿ ಕಂಡಿತು! ‘ಹಾ... ಅದು.. ಆ ಫ್ಯಾಕ್ಟರ್‌ಗಳೆವೆಯಲ್ಲ, ಅವು ಇರಲೇಬೇಕು. ಯಾಕೆಂದ್ರೆ ಅದೇ ವರ್ಕ್ ಆಗೋದು. ಅದನ್ನು ಬಿಟ್ಟು ಬೇರೆ ಮಾಡಿದರೆ ಜನ ಒಪ್ಪಿಕೊಳ್ಳಲ್ಲ’ ಎಂದರು. ಅಲ್ಲಿಗೆ ಮನವೊಲಿಸುವ ಪ್ರಯತ್ನವನ್ನು ಕೈಚೆಲ್ಲಿ ಬಂದ ದಾರಿಯತ್ತಲೇ ಮುಖಮಾಡಿತು ಚಿತ್ರತಂಡ.